ದಿನಾಂಕ 23.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ.ಆರ್.ಜಿ. ವಕೀಲರಿಂದಃ

ನನಗೆ ಪ್ರತಿವಾದಿಯ ಪರಿಚಯವಿದೆ. ವಾದಿಯ ಅಣ್ಣ ಮಂಜುನಾಥ್ ರವರ ಪರಿಚಯವಿದೆ. ಪ್ರತಿವಾದಿಗೆ ಸಾಕಷ್ಟು ಹಣಕಾಸು ಮತ್ತು ಜಮೀನಿನ ವಹಿವಾಟು ಇದೆ ಎಂದರೆ ಸರಿ. ಉಮರ್ ಬೇಗ್ ಕಾಲೋನಿಯಲ್ಲಿ ಅವರಿಗೆ ಸುಮಾರು 35 ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನಾಗಮಂಗಲ ರಸ್ತೆಯಲ್ಲಿ ವಾಣಿಜ್ಯ ಮಳಿಗೆಗಳು ಇವೆ ಎಂದರೆ ಸರಿ. ಅದೇರೀತಿ ಕೆ.ಆರ್.ಪೇಟೆಯಲ್ಲಿ ಶಾಮಿಲ್ ಮತ್ತು ಅದಕ್ಕೆ ಹೊಂದಿಕೊಂಡಂತೆ ಮಳಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ನಡುವೆ ಆದ ಕರಾರಿನ ದಿನಾಂಕ ನನಗೆ ಗೊತ್ತಿಲ್ಲ. ಸಾಕ್ಷಿದಾರರು 2015 ರಲ್ಲಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 2015 ರಲ್ಲಿ ಕರಾರು ಆಗಿರುತ್ತದೆ ಎಂದು ಬರೆಸಿರುತ್ತೇನೆ. ಕ್ರಯದ ಕರಾರು ಪತ್ರ ಸಂಬಂಧಪಟ್ಟಂತೆ ವ್ಯವಹಾರವು ಮಿಲ್ ನ ಬಳಿ ಆಗಿರುತ್ತದೆ. ಸದರಿ ದಿನ ವಾದಿಯು ಪ್ರತಿವಾದಿಗೆ ಮುಂಗಡವಾಗಿ 10 ಲಕ್ಷ ಹಣ ಕೊಟ್ಟಿರುತ್ತಾರೆ. ಕರಾರು ಪತ್ರವನ್ನು ಬರೆದವರು ಬಸವರಾಜು ಎಂಬುವವರು. ನೋಂದಣಿ ಅಧಿಕಾರಿಯವರ ಸಮಕ್ಷಮ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಹಣಕಾಸಿನ ವಹಿವಾಟು ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಅಣ್ಣ ಶಾ ಮಿಲ್ ನ ಪಶ್ಚಿಮ ದಿಕ್ಕಿಗೆ ಮನೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿಯು ವಾದಿಯ ಅಣ್ಣ ಮಂಜುನಾಥ್ ರವರ ಬಳಿ 2 ಲಕ್ಷ ಕೈಸಾಲ ವ್ಯವಹಾರಕ್ಕಾಗಿ ಕೇಳಿದ್ದು ವಾದಿಯ ಅಣ್ಣ ಆಧಾರ ಪತ್ರ ಬರೆದುಕೊಳ್ಳುವ ಬದಲು ತಮ್ಮ ಹೆಸರಿಗೆ ಕ್ರಯದ ಕರಾರು ಪತ್ರವನ್ನು ಮೋಸದಿಂದ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ, ವಾದಿಯ ಅಣ್ಣ ಮಂಜುನಾಥ್ ರವರ ಜೊತೆ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ1 ಕ್ರಯದ ಕರಾರು ಪತ್ರಕ್ಕೆ ಸುರೇಶ್ ರವರು ಸಹಿ ಮಾಡಿರುತ್ತಾರೆ. ಯಾವುದೇ ಹಣಕಾಸು ವ್ಯವಹಾರ ನಡೆಯದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಸುಧೀರ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.